ಉಂಟು ಮಾಡುವ ಗಾನ, ಗಿಣಿ ಗೊರವಂಕ ಮುಂತಾದ ಪಕ್ಷಿಗಳ ಇಂಪುದನಿ ಅದರೊಡನೆ ಬೆರೆತು ಬರುತ್ತಿತ್ತು.

ಹರಿಣ ಚಿಗರೆಗಳು ಅಳುಕಿಲ್ಲದೆ ಲೀಲೆಯಿಂದ ಓಡಾಡುತ್ತಿದ್ದವು. ಮೆಲುಗಾಳಿಯು ಹೂಗಂಪನ್ನು ಹೊತ್ತು ಬನ ಬನದಲ್ಲಿ ಅಲೆದಾಡುತ್ತಿತ್ತು. ಆ ಕಾನನವು ತಂಪು ಬಿಸಿಲಿನ ಇಂಪಾದ ಸಂಭ್ರಮದಿಂದ ಸೊಂಪಾಗಿ ಮಧು ಮಹೋತ್ಸವವಾದ ರೀತಿ ರಾರಾಜಿಸಿತು. ಅರ್ಜುನನು ಆ ಮನೋಹರ ಸನ್ನಿವೇಶದಲ್ಲಿ ಮದನ ವರದಿಂದ ಸ್ವರ್ಗ ಸೌಂದರ್ಯದ ಐಸಿರಿಯನ್ನು ಸೂರೆಗೊಂಡಂತೆ ಶೋಭಿಸುತ್ತಿದ್ದ ಚಿತ್ರಾಂಗಿಯನ್ನು ಕಂಡನು. ಅಂಗಜನ ಶೃಂಗಾರ ಜಾಣತನದಿಂದ ಚೆಲುವಾದ ಅವಳು, ಆ ವ್ರತಧಾರಿಯನ್ನು ರಂಜಿಸಿ ಕಾಂತಿಪ್ರಭೆಯನ್ನು ಬೀರಿದಳು.

ಸರ್ವರಸ ರೂಪುಗಳ ಗಂಧವರ್ಣಗಳ ಸ್ಪರ್ಶಾನಂದ, ಸುರಗಾಯನ ನೆರೆದು ಅವಳ ಹಿನ್ನೆಲೆಯನ್ನು ಚಿತ್ರಿಸಿದ್ದವು. ಕೆರೆಯ ಹಸುರಿಡಿದ ದಡದ ಅಂಚಿನಲ್ಲಿ ಆ ಧವಳ ಸ್ವಪ್ನೆಯು ಚೈತ್ರ ಹೊತ್ತು ತಂದು ಹೂ ತುಂಬಿದ ಲತೆಯಂತೆ ತುಸು ಬಾಗಿದಳು. ಪ್ರಾತಃಸರೋವರದ ಆ ಜಲ ದರ್ಪಣದಲ್ಲಿ ತನ್ನನ್ನು ತಾನು ದರ್ಶಿಸುತ್ತ ಬೆಚ್ಚಿದಳು. ಪ್ರತಿಬಿಂಬದ ಸೊಬಗಿಗೆ ಆಶ್ಚರ್ಯಚಕಿತಳಾಗಿ ತನಗುಂಟಾದ ಆಹ್ಲಾದದಿಂದ ನಲಿದಳು! ನಗೆಯ ಬಿಳಿಯ ಅರೆಬಿರಿದ ಹೂವು, ತೊಂಡೆಹಣ್ಣಿನಂತಹ ತುಟಿಗಳಿಂದ ಹೊಮ್ಮಿ ನಿಂತು ಅರಳಿತು.

ಚೆನ್ನೆಯು ತನ್ನ ಕೋಮಲವಾದ ತೋಳುಗಳಿಂದ, ಚಿಗುರಿನಂತಹ ಮದನ ಕೈಯ ಕತ್ತಿಯಿಂದ ಕೊಳದ ಮಸಿಗತ್ತಲೆಯ ಕಟ್ಟನ್ನು ಒಡೆದಳು. ಅದರ ಕಪ್ಪುಗತ್ತಲ ಪ್ರವಾಹವನ್ನು ಓಡಿಸುವಂತೆ ತುರುಬು ಸಡಿಲಿಸಿ ಕೇಶಪಾಶವನ್ನು ಧರ್ಮಾನುಜನ ವ್ರತದ ಕೊರಳಿಗೆ ಉರುಳು ಕಣ್ಣಿಯನ್ನು ಕಟ್ಟಿ ಬಿಗಿಯುವಂತೆ ಬೀಸಿದಳು. ನರನು ಮೈಯೆಲ್ಲ ಕಣ್ಣಾಗಿ, ಜೀವವೇ ದೃಷ್ಟಿಯಾದಂತೆ ನೋಡುತ್ತಿದ್ದನು!

ನಿಶ್ಚಲವಾದ ಯಮುನೆಯ ಅಲೆಯ ಕತ್ತಲ ಪ್ರವಾಹವು ಅರ್ಧಚಂದ್ರನಾಕಾರದ ಬೆಳದಿಂಗಳ ಬೆಟ್ಟದಿಂದ ಇಳಿದು ಬಂದಿತೊ ಎನ್ನುವಂತೆ, ಚಿತ್ರಾಂಗದೆಯ ಕರಿಕೂದಲು ತೆರೆತೆರೆಯಾಗಿ ತುಂಬು ಪ್ರವಾಹದಂತೆ ಜೋಲಾಡಿತು. ಆ ಬಿಡುಮುಡಿಯ ದೊಡ್ಡಪ್ರವಾಹವು ಅಮಾವಾಸ್ಯೆಯ ಕತ್ತಲನ್ನು ಮೆತ್ತಿ ರಾರಾಜಿಸಿತು.

ಅವಳು ತನ್ನ ಮೃದುವಾದ ಎದೆಯ ತೆರೆಮರೆಯ ಸೆರಗನ್ನು ನಿಧಾನವಾಗಿ ಮೆಲ್ಲನೆ ಪಕ್ಕಕ್ಕೆ ಸರಿಸಿದಳು. ನಾಚಿಕೆಯಲ್ಲಿ ತೋರುವ ಪವಿತ್ರತೆ ಶಿಥಿಲವಾಗದ, ಕುಂದಿಲ್ಲದ ಅವಯವದ ತಾವರೆ ದಿಂಡಿನಂತಹ ತನ್ನ ಕೋಮಲತೆಯನ್ನು ಈಕ್ಷಿಸಿದಳು. ಹೆಮ್ಮೆಯಿಂದ ಬಿಂಕದ ವಯ್ಯಾರದಿಂದ ಅರ್ಜುನನು ಇದ್ದ ಕಡೆಗೆ, ಕಂಡರೂ ಕಾಣದಂತೆ ನೋಡಿದಳು.

ಅವಳ ಉಡುಗೆ ಕರಗುತ್ತ ಆಕಾಶದಂತೆ ಸರ್ವ ಗೋಚರವಾಯಿತೊ ಎನ್ನುವಂತಾಯಿತು. ಅವಳ ಮುಚ್ಚಿದೆಯೆ ಅಂಗದ ಸೊಬಗನ್ನು ಸೂಕ್ಷ್ಮತರವಾಗಿ ಆವರಿಸಿತು!

ಕೊಳವು ಅವಳ ಪ್ರತಿಬಿಂಬವನ್ನು ಹೊತ್ತು, ತಾನು ಧನ್ಯನಾದೆನೆಂದು ಜುಮ್ಮೆಂದು ಪುಳಕಿಸುವಂತೆ, ತಂಗಾಳಿಯ ಚುಂಬನ ಕ್ರೀಡೆಯಿಂದ ಕಂಪಿಸಿತು.

ಅವಳನ್ನು ಕಣ್ಣಾಗಿ ಕಾಣುತ್ತ ಅರ್ಜುನನು ಬೆರಗು ಬಡಿದು ನೋಡುತ್ತಿದ್ದನು. ಆ ಭಾಮೆ ಬಂದ ಹಾಗೆ ಹಿಂದಿರುಗಿ ನಿಬಿಡಾರಣ್ಯದಲ್ಲಿ ಮರಗಿಡ ಪೊದರುಗಳ ಎಲೆಯ ಗರ್ಭವನ್ನು ಹೊಕ್ಕಳು. ಸುರಸಂಧ್ಯೆಯು ತಾನು ಇರುಳಿನ ತೋಳಿನಸೆರೆಯಲ್ಲಿ ಇಳಿದು ಇಲ್ಲವಾಗುವಂತೆ ಅವಳು ಕಾಣದಂತೆ ಮರೆಯಾದಳು.

ಸೃಷ್ಟಿಯ ಹೃದಯಸತ್ತ್ವವು ತಾನು ಪರಮ ಸೌಂದರ್ಯದ ಆಕೃತಿ ಪಡೆದು ಇಷ್ಟು ಹೊತ್ತು ಮಿಂಚಿ ಸುಳಿದಾಡಿದಂತಾಯಿತು. ಅರ್ಜುನನು ಮೇಲೆದ್ದನು. ಕನಸಿನಿಂದ ಎಚ್ಚರಗೊಂಡರೂ ಅದನ್ನು ಹುಡುಕುವವನಂತೆ ವ್ರತವನ್ನು ಹಳಿದನು. ನುಡಿಯ ಆಣೆಯನ್ನು ಕಡೆಗಣಿಸಿದನು.

ಅವನು ತುಂಬಿ ಭೃಂಗ ಪಕ್ಷಿಗಳ ಸಂಗೀತಸಂಗದಲ್ಲಿ ಮಧುರಂಗದ ಅಂತರಂಗದ ಕಾಡುಹಾದಿಯಲ್ಲಿ ಸಾಗಿದನು. ಪ್ರೇಮಾಮೃತದ ಭ್ರಮೆ ಆವರಿಸಿದೆ ಎನ್ನುವಂತೆ ಸೊಬಗಿನ ಅರಸಿಯನ್ನು ಹುಡುಕುತ್ತ ಸಾಕಷ್ಟು ಸಮಯ ತೊಳಲಾಡಿದನು. ಹೀಗೆ ಕಬ್ಬಿನ ಬಿಲ್ಲನ್ನು ಹಿಡಿದ ಮನ್ಮಥನ ಬರುವಿಕೆಯು ನರ (ಅರ್ಜುನ)ನನ್ನು ಮರುಳು ಮಾಡಿ ಚಿತ್ರಾಂಗದೆಯ ನೆಲೆಗೆ ಕೊಂಡೊಯ್ದಿತು!

## ವೈರಾಗ್ಯದಾತ್ಮಹತ್ಯೆಗೆ ಮಾಯೆ ಸಾರ್ಚಿದಾ ಪ್ರಗ್ರಹಂ!

ಅರ್ಜುನನು ಶಿವನ ದೇವಾಲಯವನ್ನು ಕಂಡುದೇ ತಡ ಹೆಬ್ಬಾಗಿಲ ಬಳಿಗೆ ಹೋಗಿ ನೋಡಿದನು. ಯತಿಗೆ ಶಿವನ ಗುಡಿಯೆ ಮದನನ ಸದನವಾಯಿತು ಎನ್ನುವಂತೆ ಆ ಕಾಮಿನಿಯ ದೇಹರೂಪ ಗೋಚರಿಸಿತು. ಅದು ಅವನ ವೈರಾಗ್ಯದ ಆತ್ಮಹತ್ಯೆಗೆ ಮಾಯೆ ಬೀಸಿದ ಹಗ್ಗದಂತಿತ್ತು.

ವಿಸ್ತಾರ ಸಾಗರದಲ್ಲಿ ಬಿರುಗಾಳಿಗೆ ಉಬ್ಬೆದ್ದು ಕ್ಷೋಭೆಗೊಳಗಾದ ತರಂಗಗಳು ತಾಂಡವ ನೃತ್ಯವನ್ನು ಮಾಡುವವು. ಅದರಂತೆ ಭಾವದುದ್ರೇಕವು ಅರ್ಜುನನ ಪ್ರಾಣಸಾಗರದ ಹೃದಯ ತೀರವನ್ನು ಆಕ್ರಮಿಸಿದವು. ಅವನು ಒಮ್ಮೆ ಮಾತನಾಡಲು ಪ್ರಯತ್ನಿಸಿದ, ಇನ್ನೊಮ್ಮೆ ಪ್ರಯತ್ನಿಸಿದ. ನುಡಿ ಹೊಮ್ಮದೆ ಕಲ್ಲಿನ ಪ್ರತಿಮೆಯಂತೆ ಬರಿದೆ ಮಿಳ್ಮಿಳನೆ ನೋಡುತ್ತಿದ್ದ.

ಮೃಗಾಕ್ಷಿ ಚಿತ್ರಾಂಗದೆಯು ಆ ಶಾಂತಿಮಯ ದೇವಕುಲದ ಅಂಗಣದಲ್ಲಿ ಹೂಗಳಿಂದ ತುಂಬಿದ ಮಲ್ಲಿಗೆಯ ಹಂಬಿನ ಬಳಿ ಪಾದದ ತುದಿಬೆರಳ ಮೇಲೆ ಬೆಡಗಿನಿಂದ ನಿಂತು ತೋಳೆತ್ತಿ ಹೂ ಕೊಯ್ಯುತ್ತಿದ್ದಳು. ಅವಳು ಮಿರು ಮಿರುಗುವ ಪೀತ ನೀಲಕಂಠದ ಮಯೂರಿ ವರ್ತಿಸುವಂತೆ, ತನ್ನ ಶಂಖದಂತಿರುವ ಕೊರಳನ್ನು ಬಿಂಕದಿಂದ ಕೊಂಕಿಸುತ್ತ ಪರಿಚಿತ ಧನಂಜಯನನ್ನು ಅಪರಿಚಿತೆಯ ಹಾಗೆ ನೋಡಿದಳು.

ಕೆಸುವಿನ ಅಗಲ ಎಲೆಯ ಮೇಲೆ ಶೋಭಿಸುವ ಹಿಮದ ಬಿಂದು ಗಾಳಿಗೆ ಜಾರಿ ಬೀಳುವಂತೆ ಧಾವಿಸುತ್ತ ಅವನ ಹತ್ತಿರಕ್ಕೆ ಓಡಿ ಬಂದಳು. ಮುಖ ನಾಚಿಕೆಯಿಂದ ಕೆಂಪೇರಿತ್ತು. ಅವಳು ಕೈ ಜೋಡಿಸುತ್ತ ವೀಣೆ ಮಿಡಿದಂತೆ ಸವಿಗೊರಲಿನಿಂದ ಹೀಗೆ ವಿನಯದ ನುಡಿ ಆಡಿದಳು.

‘ಯತಿಪತಿಯೆ, ದಯಮಾಡಿ ಬನ್ನಿ, ನೀವು ನನಗೆ ಸನ್ಮಾನ್ಯರು ಮತ್ತು ಅತಿಥಿ. ಈ ದೇಗುಲವು ನನ್ನ ಮನೆ ಹಾಗೂ ಆಶ್ರಮ. ನಾನು ಇಲ್ಲಿ ತಪಸ್ವಿನಿ, ನಿನಗೆ ಸುಸ್ವಾಗತ.’

ಹೀಗೆ ಮಾತುಗಳ ಮುತ್ತುಮಳೆ ಪಳಪಳನೆ ಸುರಿಯುತ್ತಿರಲು ಅರ್ಜುನನು ಕಡು ಬಡವನಂತಾದನು. ನಾಚಿದನು; ತನ್ನ ವೇಷಕ್ಕೆ ತಾನೆ ಅಸಹ್ಯ ಪಟ್ಟುಕೊಂಡನು. ‘ಯತಿಪತಿ’ ಎಂಬ ಪದದ ಯತಿತ್ವವನ್ನು ಹಳಿಯುತ್ತ, ಪತಿತ್ವವನ್ನು ಅಪೇಕ್ಷಿಸುತ್ತ ತನ್ನ ನಿಜವನ್ನು ಅತಿ ಕಾತುರತೆಯಿಂದ ಹೀಗೆ ಹೇಳಿದನು.

‘ಕುಸುಮ ಕೋಮಲೆ, ನಾನು ಯತಿಯಲ್ಲ, ಕ್ಷತ್ರಿಯ. ನೀನು ನನ್ನ ಬಗ್ಗೆ ಆ ರೀತಿಯ ಆಲೋಚನೆಗೆ ತುತ್ತಾಗಬೇಡ. ಯುದ್ಧಗಳಲ್ಲಿ ಬಿಲ್ಲನ್ನು ಹಿಡಿದು ವೈರಿಯ ರುಂಡ ಮುಂಡಗಳನ್ನು ಖಂಡ ಖಂಡವಾಗಿಸಿ ಚೆಂಡಾಡಿ ಮರದ ಕಾಂಡದಂತೆ ನೆಲದ ಮೇಲೆ ಉರುಳಿಸಿದ ಈ ಕೈಯ ಕಲೆಗಳನ್ನು ಇಲ್ಲಿ ನೋಡು. ಖಡ್ಗದ ಆಘಾತಗಳನ್ನು ಉಂಡು, ರಕ್ತಧಾರೆಯಲ್ಲಿ ಮುಳುಗಿ, ಮಜ್ಜೆಯೊಳಗೆ ಅದ್ದಿ ಬಿರುಸಾದ ದೇಹವಿದು. ನಾನು ರಾಜರ ಕುಲದಲ್ಲಿ ಜನಿಸಿದವನು. ಯತಿವೇಷ ನನ್ನ ಒಳಗಿನದಲ್ಲ, ಅದು ಆಗಂತುಕ.’

ಅದನ್ನು ಕೇಳುತ್ತ, ನಸು ಮುಗುಳ್ನಗೆಯನ್ನು ಅರಳಿಸುತ್ತ ನಾರಿ ಹೀಗೆ ನುಡಿದಳು:

‘ವೀರವರ, ನೀವು ಹೇಳುವುದೇ ಬೇಡ. ನಿನ್ನನ್ನು ಕಂಡೊಡನೆ ನನ್ನ ಎದೆಗೆ ಅದರ ಕಪಟ ಗೋಚರವಾಯಿತು. ಹಾಗೆಯೇ ನಾನಾದರೂ ಸಹ ಹುಟ್ಟು ಜೋಗಿನಿಯಲ್ಲ. ಮನಸ್ಸಿನ ಒಂದು ಬಯಕೆಯನ್ನು ಈಡೇರಿಸಿಕೊಳ್ಳಲು ಹೀಗೆ ವ್ರತಧಾರಿಯಾಗಿರುವೆನು.’

‘ಸುಂದರಿಯೆ, ನಿನ್ನ ಎದೆಯನ್ನು ಆಲಂಗಿಸಿಕೊಳ್ಳಲು ಆ ಬಯಕೆಯು ಯಾವ ಪುಣ್ಯವನ್ನು ಮಾಡಿದೆ ಎನ್ನುವುದನ್ನು ಹೇಳು. ಲೋಕದ ಬಯಕೆ ನೀನಾಗಿರುವಾಗ, ನಿನಗೆ ಉಂಟಾಗಿರುವ ಬಯಕೆ ಯಾವುದು?

‘ನಾನು ತೀರ್ಥಯಾತ್ರೆಯಲ್ಲಿ ಉದಯಾದ್ರಿ ಅಸ್ತಾದ್ರಿಗಳ ಮಧ್ಯೆ ಸಾಗರದಿಂದ ಆವೃತವಾದ ಎಲ್ಲ ದೇಶ ದೇಶಗಳನ್ನು ಸಂಚರಿಸಿ ಬಂದಿದ್ದೇನೆ. ಓ ಲಲನೆ, ನಿನ್ನ ಬಯಕೆ ಏನು ಎನ್ನುವುದನ್ನು ಮತ್ತು ನೀನು ಯಾರು ಎನ್ನುವುದನ್ನು ಹೇಳು. ನನ್ನ ತಿಳಿವು ಸಾಹಸಗಳಿಗೆ ಒಳಗಾದುದೆಲ್ಲವನ್ನು ಸಂತೋಷದಿಂದ ಅರ್ಪಿಸುತ್ತೇನೆ. ಓ ಭುವನ ಮೋಹನ ಮೂರ್ತಿಯೆ, ನಿನ್ನ ಬಯಕೆ ಏನೆಂದು ಹೇಳು!’

‘ನನಗೆ ಇಷ್ಟವಾದ ಅವನು ಜಗತ್ಪ್ರಸಿದ್ಧ ವೀರ. ಸೌಂದರ್ಯದಲ್ಲಿ ಬುದ್ಧಿಯಲ್ಲಿ ಮಹಾ ಸಾಹಸದಲ್ಲಿ ಅವನಿಗೆ ಸಮಾನರಾದವರು ಮೂರು ಲೋಕಗಳಲ್ಲಿ ಯಾರೂ ಇಲ್ಲ!’

‘ಹೌದೆ? ದಿಟವೆ? ದೇವಿಯ ಕೃಪಾದೃಷ್ಟಿಯ ಪಾಲನೆಗೆ ಪಾತ್ರನಾದ ಪುಣ್ಯಶಾಲಿ ಯಾರು?’